## ಅಧ್ಯಾಯ - 10

# ಸಾಕ್ಷಿಯನ್ನು ಕೊಡುವುದರಲ್ಲಿ ಕ್ರೈಸ್ತರ ಪಾತ್ರ

ಯೇಸುಕ್ರಿಸ್ತನು ನಿನ್ನನ್ನು ರಕ್ಷಿಸಿದ ಮೇಲೆ, ಆತನ ಶಾಂತಿಯನ್ನು ನಿನಗೆ ಕೊಟ್ಟ ಮೇಲೆ. ಯೇಸುವನ್ನು ಕುರಿತು ನೀನು ಇತರರಿಗೆ ಅವರೂ ರಕ್ಷಣೆ ಹೊಂದುವಂತೆ ಸಾಕ್ಷಿಯನ್ನು ಹೇಳಬೇಕು.

ಆದ್ದರಿಂದ ನೀವು ಹೊರಟುಹೋಗಿ ಎಲ್ಲಾ ದೇಶಗಳ ಜವರನ್ನು ಶಿಷ್ಯರನ್ನಾಗಿ ಮಾಡಿರಿ. ಅವರಿಗೆ ತಂದೆಯ, ಮಗನ ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶ ಮಾಡಿರಿ (ಮತ್ತಾಯ ೨೮ : ೧೮,೨೦)

ಒಂದು ವೇಳೆ ನೀನು ನದಿಯಲ್ಲಿ ಮುಳುಗುತ್ತಿರುವ ಓಬ್ಬವ್ಯಕ್ತಿಯನ್ನು ರಕ್ಷಿಸಿ, ನಾನು ಅವನ ಪ್ರಾಣವನ್ನು ಉಳಿಗಿದೆ ನೋಡಿರಿ ಎಂದು ನೀನು ನನ್ನನ್ನು ಹೊಗಳಿ ಕೊಳ್ಳಬಹುದು. ಆದರೆ ಅದಕ್ಕಿಂತ ಹೆಚ್ಚಾಗಿ ನಿನ್ನ ಪ್ರಾಣಃಆತ್ಮ-ದೇಹವು ನರಕಕ್ಕೆ ಹೋಗದಂತೆ ನಿನ್ನನ್ನು ಸಂಪೂರ್ಣವಾಗಿ ಪ್ರೀತಿಸಿ ನಿನಗಾಗಿ ತನ್ನ ಪ್ರಾಣವನ್ನೇ ಕೊಟ್ಟು, ರಕ್ತವನು ಸುರಿಸಿದ ಯೇಸುಕ್ರಿಸ್ತನನ್ನು ಬಂದು ಸಾರಿನೋಡು. ಆತನು ನಿನಗಾಗಿ ಮಾಡಿದ ಶ್ರೇಷ್ಟವಾದ ಕಾರ್ಯವನ್ನು ಇತರರಿಗೆ ವಿವರಿಸು. ಅವರು ಇದನ್ನು ಕೇಳಿ ಯೇಸು ಕ್ರಿಸ್ತನನ್ನು ನಂಬುವಂತೆಯೂ ಬರುವ ಭಯಂಕರವಾದ ದೇವರ ಶಿಕ್ಷೆಯಿಂದಲೂ, ನಕರದಿಂದಲೂ, ನಿತ್ಯ ನಾಶನದಿಂದಲೂ ತಪ್ಪಿಸಲ್ಪಡುವಂತೆ ಅವರಿಗಾಗಿ ಪ್ರಾರ್ಥಿಸು.

> ''ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಸುವಾರ್ತೆಯನ್ನು ಸಾರಿರಿ. ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು. ನಂಬದೇ

ಹೋಗುವವನು ದಂಡನೆಗೆ ಗುರಿಯಾಗುವನು''

(ಮಾರ್ಕ ೧೬ : ೧೫, ೧೬)

ಇಗೋನಾನು ಬೇಗನೆ ಬರುತ್ತೇನೆ ನಾನು ಪ್ರತಿಯೊಬ್ಬನಿಗೆ ಅವನವನ ನಡತೆಯ ಪ್ರಕಾರ ಕೊಡತಕರ ಪ್ರತಿಫಲವು ನನ್ನ ಕೈಯಲ್ಲಿ ಇದೆ.

(ಪ್ರಕಟಣೆ ೨೨ : ೧೨)

## ನಾನು ಏನು ಹೇಳಬೇಕು ?

ಯೇಸುಕ್ರಿಸ್ತನೇ ನಿನ್ನ ಜೀವನವನ್ನು ಬದಲಾವಣೆ ಮಾಡಿದ್ದಾನೆ. ಈ ಮಾತನ್ನು, ನೀನು ನೂತನ ಮನಸ್ಸನ್ನು ಹೇಗೆ ಪಡೆದಿರುವೆ, ನಿನಗೆ ಶಾಂತಿ ಹೇಗೆ ಸಿಕ್ಕಿತು. ಯೇಸುವಿನ ರಕ್ತವು ಹೇಗೆ ನಿನ್ನ ಪಾಪವನ್ನು ತೊಳೆದು ನಿನ್ನನ್ನು ನೀತಿವಂತನನ್ನಾಗಿ ಮಾಡಿತು ? ಈ ವಿಷಯಗಳನ್ನು ಇತರರಿಗೆ ಅರ್ಥವಾಗುವ ರೀತಿಯಲ್ಲಿ ಪ್ರಾರ್ಥನಾಪೂರ್ವಕವಾಗಿ ವಿವರಿಸು. ಮತ್ತು ಅವರು ದೇವರ ವಾಕ್ಯವನ್ನು ಓದುವಂತೆ ಅವರನ್ನು ಪ್ರೋತ್ಸಾಹಿಸು. ಇದೇ ನೀನು ನಿನ್ನ ಜೀವನದಲ್ಲಿ ಹೊಂದಿದ ಸಂತೋಷವನ್ನು ಸಾಕ್ಷಿಯಾಗಿ ಹಂಚುವುದಾಗಿದೆ. ರಕ್ಷಣೆ ಹೊಂದಲು ಸತ್ಯವೇದದಲ್ಲಿ (ಬೈಬಲ್‌ನಲ್ಲಿ) ಈ ಕೆಳಗಿನ ವಾಕ್ಯಗಳನ್ನು ಓದಿದಾಗ ಪವಿತ್ರಾತ್ಮನು ನೀನು ಓದಿ ಅರ್ಥಮಾಡಿಕೊಂಡು ಪಾಪವನ್ನು ಬಿಡುವಂತೆ ಇತರರಿಗೆ ಸಹಾಯ ಮಾಡುವನು.

೧. ಪಾಪ (ರೋಮಾ ೩ : ೨೩ ಗಲಾತ್ಯ ೫ : ೧೯-೨೧)

೨. ದೇವರ ಪ್ರೇಮ (ಯೋಹಾನ ೩ : ೧೬. ೧ ಯೋಹಾನ ೩ :೮ ಲೂಕ ೧೯ : ೧೦ ಗಲಾತ್ಯ ೧ : ೪)

೩. ಯೇಸುಕ್ರಿಸ್ತನೇ ರಕ್ಷಕನು (ಅ. ಕೃ. ೪ : ೧೨, ರೋಮಾ ೬ : ೨೩, ೭ : ೨೪, ೨೫) (ಯೋಹಾನ ೮ : ೧೨, ೧೪ : ೬, ೧ ಪೇತ್ರ ೧ : ೧೮, ೨೯)

೪. ಯೇಸುವನ್ನು ನಂಬುವುದು. (ರೋಮಾ ೧೦ : ೮-೧೦, ೧ ಯೋಹಾನ ೧ : ೫-೧೦, ೧:೭, ೯)

೫. ರಕ್ಷಣೆಯ ನಿಶ್ಚಯತೆ (ಎಫೆಸ ೧:೭ ಅ.ಕೃ ೪ : ೧೬, ರೋಮಾ ೮:೧೧ ಥೆಸಲೋನಿಕ ೧:೧೦)

೬. ಬೆಳೆದಂತೆ ಎಚ್ಚರಿಕೆ : (ಎಫೆಸ ೨:೩-೫, ೧ ಕೊರಿಂಥ ೬:೪,೧೦) (ಇಬ್ರಿಯ ೬:೧, ೪, ಎಫೆಸ, ೬:೧-೧೦)

೭. ದೇವರ ವಾಗ್ದಾನ: (ಮತ್ತಾಯ ೨೪:೧೪ ಯಾಕೋಬ ೧:೧೨ ಪ್ರಕಟಣೆ ೨:೨೬, ೩:೫, ೧೦, ೧೧, ೧೨, ೧೯, ೨೫ ಪ್ರಕಟಣೆ ೨೨:೩,೬,೭,೧೩,೨೦.೨೧

ಇಲ್ಲಿ ವಿಷಯಗಳನ್ನು ವಾಕ್ಯದ ಮೂಲಕವಾಗಿ ಹೇಗೆ ನಿನಗೆ ತಿಳಿಸಿದೆ ಹಾಗೆಯೇ ನೀನು ಕೂಡ ನಿನ್ನ ಸ್ನೇಹಿತನಿಗೆ ವಿವರಿಸಬೇಕು. ಹೀಗೆ ದೇವರವಾಕ್ಯವನ್ನು ನೀವು ವಿವರಿಸಿದಾಗ ದೇವರು ಅದ್ಭುತವಾದ ಕಾರ್ಯವನ್ನು ನಡಿಸುವನು.

ಯಾವನಾದರೂ ನಿನ್ನನ್ನು ಕೇಳಿದಾಗ ನೀನು ಹೊಂದಿರುವ ಶಾಂತಿ ಸಂದೇಶವನ್ನು ಸಂತೋಷವನ್ನು ಯೇಸು ಕ್ರಿಸ್ತನ ಪ್ರೀತಿಯನ್ನು ತಪ್ಪದೇ ವಿವರಿಸು. ''ನಿಮ್ಮಲ್ಲಿರುವ ನಿರೀಕ್ಷೆಗೆ ಆಧಾರವೇನೆಂದು ಕೇಳುವವರಿಗೆ ಉತ್ತರ ಹೇಳುವುದಕ್ಕೆ ಯಾವಾಗಲೂ ಸಿದ್ದವಾಗಿರಿ. (೧ ಪೆತ್ರನು ೩ : ೧೫)

## ಸಾಕ್ಷಿಕೊಡಲು ಉದಾಹರಣೆಯಾಗಿರಬೇಕು

ಪ್ರೀತಿಯುಳ್ಳನನ್ನ ಸಹೋದರ, ಸಹೋದರಿ, ನೀನು ಯೇಸುಕ್ರಿಸ್ತನನ್ನು ನಂಬಿ ಆತನ ವಾಕ್ಯದ ಪ್ರಕಾರವಾಗಿ ಜೀವಿಸುತ್ತಾ, ಪವಿತ್ರಾತ್ಮನ ವರಗಳನ್ನು ಹೊಂದಿ. ಮುಂದು ನಿನ್ನ ಹೃದಯದಲ್ಲಿ ದೇವರೊಂದಿಗೆ ಸಂತೋಷಸುತ್ತಾ, ಅನುದಿನವೂ ದೇವರವಾಕ್ಯವನ್ನು ಧ್ಯಾನಿಸುತ್ತಾ, ಬದುಕುತ್ತಾ, ನಿನ್ನ ವ್ಯಕ್ತಿಗತವಾದ ಪ್ರಾರ್ಥನೆಯನ್ನು ಮಾಡುತ್ತಾ ಇದ್ದಕೊಂಡು ಎಲ್ಲರನ್ನು ಪ್ರೀತಿಸುತ್ತಾ ಮುಖ್ಯವಾಗಿ ನಿನ್ನನ್ನು ದ್ವೇಷಿಸುವವರಿಗೆ ಪ್ರಾರ್ಥಿಸಿ ಅವರನ್ನೂ ಕೂಡ ಪ್ರೀತಿಸುತ್ತಾ ದೇವರು ಹೇಳಿದ ರೀತಿಯಲ್ಲಿ ಜೀವನ ಮಾಡಲು ಪ್ರಯತ್ನಿಸುತ್ತಾ ಇರುವಾಗ ನೀನು ಇತರರೊಂದಿಗೆ ಕೊಡುವ ಯೇಸುವನ್ನು ಕುರಿತು ಸಾಕ್ಷಿಕೊಡುವಾಗ,

ಸಹೋದರನೇ ನಿಜವಾಗಿಯೂ ದೇವರು ನಿನ್ನ ಮೂಲಕ ಅನೇಕರನ್ನು ತನ್ನ ರಾಜ್ಯ ಖಂಡಿತವಾಗಿ ಸೇರಿಸಿಕೊಳ್ಳುವನು. ನೀನು ಆತನಲ್ಲಿ ಪ್ರಕಾಸಿಸುವ ನಕ್ಷತ್ರದಂತೆ ಅನೇಕರಿಗೆ ಬೆಳಕಾಗಿ ಜೀವಿಸಲು ಆತನೇ ಸಹಾಯಮಾಡುತ್ತಾನೆ.

ಮತ್ತಾಯ ೫:೧೮, ೧೯, ೪೮, ೬:೨೧-೨೩ ೨೪-೨೭ ಪ್ರಕಟಣೆ ೧:೩, ಯೂದಾ ೨೦-೨೪.

## ಪ್ರಾರ್ಥನೆ :

ಸರ್ವಶಕ್ತನಾದ ಯೇಸುಕ್ರಿಸ್ತನೇ. ಈ ಪುಸ್ತಕವನ್ನು ಧ್ಯಾನಮಾಡಿ ಓದಲು ಸಹಾಯ ಮಾಡಿದ್ದಕ್ಕಾಗಿ ನಿನಗೆ ಸ್ತೋತ್ರ, ಯೇಸುವೇ, ನಿನ್ನನ್ನು ನಂಬಿ, ನಿನಗೆ ಸಾಕ್ಷಿಯಾಗಿ ಜೀವಿಸಲು ನೀನು ನನಗೆ ವಿವರಿಸಿದ ಎಲ್ಲಾ ಮಾತುಗಳಿಗಾಗಿ ಸ್ತೋತ್ರ. ನಿನ್ನ ವಾಕ್ಯವೇ ಸತ್ಯವಾದದ್ದು. ನೀನು ನನಗೆ ತಿಳಿಸಿದ ಪ್ರಕಾರ ರಕ್ಷಣೆ ಹೋಂದಿ, ಪವಿತ್ರಾತ್ಮನಿಂದ ನಡಿಸಲ್ಪಟ್ಟು ನೀವು ಕೊಡುವ ಆತ್ಮವರಗಳನ್ನು ಪಡೆದು ಈ ಲೋಕದಲ್ಲಿ ಸಾಕ್ಷಿಯಾಗಿ ಜೀವಿಸಲು ಅನೇಕರನ್ನು ನಿನ್ನ ರಾಜ್ಯಕ್ಕೆ ತರಲು ನನ್ನನ್ನು ಬಲಪಡಿಸಿ ನೀನು ಮಧ್ಯ ಆಕಾಶದಲ್ಲಿ ನನ್ನನ್ನು ಕರೆವಾಗ ಇಗೊ ಸಿದ್ದವಾಗಿ ಇದ್ದೇನೆ ಎಂದು ಧೈರ್ಯವಾಗಿ ಹೇಳಿ ನಿನ್ನೊಂದಿಗೆ ರಾಜ್ಯವಾಳಲು ನನ್ನನ್ನು ನೀನು ಬರುವವರೆಗೆ ಬಲಪಡಿಸಿ ನಡೆಸುತ್ತೀಯಂದು ನಂಬಿ ಯೇಸುಕ್ರಿಸ್ತನ ಪರಿಶುದ್ಧವಾದ ಹೆಸರಿನಲ್ಲಿ ಪ್ರಾರ್ಥಿಸಿ ಸ್ತುತಿಸುತ್ತೇನೆ ತಂದೆ. ಆಮೇನ್.

ಕನ್ನಡಕ್ಕೆ ಅನುವಾದ ಮಾಡಿದವರು
ಸಹೋದರ - ಸಿ. ಪಾಲ್
ನರಸಾಪುರ - 534275
ಪಶ್ಚಿಮ ಗೋದಾವರಿ ಜಿಲ್ಲೆ
ಆಂಧ್ರಪ್ರದೇಶ್